ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ,
ಹಳೇ ಪೂ.ಬೆಂ. ರಸ್ತೆ, ನವನಗರ, ಹುಬ್ಬಳ್ಳಿ- 580 025.
Telephone No.: 0836-2223867, 2223865

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
Company Office,
Old P.B. Road, Navanagar, Hubballi-580 025.
E-mail ID: gmadmhr.hescom@gmail.com

Company Identity Number[CIN]: U31401KA2002SGC030437

ಸಂ.: ಹೆಚ್.ಸಿ.ಒ.-07/ಡಿ177/2017-18

ದಿನಾಂಕ: 17 JUN 2017

# ಸುತ್ತೋಲೆ

ವಿಷಯ: ಹು.ವಿ.ಸ. ಕಂಪನಿಯಲ್ಲಿ ಹೊಸದಾಗಿ ನೇಮಕಗೊಂಡ ಅಧಿಕಾರಿ/ ನೌಕರರ ಅರ್ಹತಾ ಪರೀಕ್ಷಣಾ ಅವಧಿಯನ್ನು ಘೋಷಿಸುವ ಕುರಿತು.

****

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಹೊಸದಾಗಿ ನೇಮಕ ಹೊಂದಿದ ಗುಂಪು-ಎ, ಬಿ, ಸಿ ಮತ್ತು ಡಿ ಅಧಿಕಾರಿ/ ನೌಕರರ ಅರ್ಹತಾ ಪರೀಕ್ಷಣಾ ಅವಧಿ ಘೋಷಿಸಲು ವಲಯ/ ವೃತ್ತ/ ವಿಭಾಗಗಳಿಂದ ಪ್ರಸ್ತಾವನೆಯನ್ನು ಈ ಕೆಳ ಕಂಡ ಅಂಶಗಳನ್ನು ಪರಿಶೀಲಿಸಿ ಲೆಕ್ಕಾಧಿಕಾರಿ(ಆಂತರಿಕ ಪರಿಶೋಧನೆ) ರವರಿಂದ ದೃಢೀಕರಿಸಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲು ಕೋರಿದೆ.

1. ನೇಮಕಾತಿ ಪ್ರಾಧಿಕಾರವು ನೇಮಕಾತಿ ಆದೇಶದಲ್ಲಿ ವಿಧಿಸಿದ ನಿರ್ಧಿಷ್ಟ ಷರತ್ತುಗಳನ್ನು ಅಧಿಕಾರಿ/ ನೌಕರರು ಪೂರೈಸಿರುವ ಬಗ್ಗೆ ಪರಿಶೀಲಿಸುವುದು.
2. ನೌಕರರ ವರ್ಗೀಕರಣ, ಶಿಸ್ತು ಪಾಲನೆ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಾವಳಿನುಸಾರ ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣ, ಭ್ರಷ್ಟಾಚಾರ ನಿಗ್ರಹ ದಳದ ಪ್ರಕರಣ ಹಾಗೂ ಕ್ರಿಮಿನಲ್ ಪ್ರಕರಣಗಳು ಬಾಕಿ ಇರುವ/ ಇಲ್ಲದಿರುವ ಮತ್ತು ವಿಚಾರಣೆಗಳು ಜರುಗಿ ದಂಡನಾವಧಿಯು ಜಾರಿಯಲ್ಲಿರುವ ಕುರಿತು ನೌಕರನ ಎಲ್ಲಾ ಮೇಲಾಧಿಕಾರಿಗಳಿಂದ ದೃಢೀಕರಣವನ್ನು ಪಡೆಯವುದು.
3. ಅಧಿಕಾರಿ/ ನೌಕರರು ನೇಮಕಾತಿಗಾಗಿ ಸಲ್ಲಿಸಿರುವ ಮೂಲ ದಾಖಲಾತಿ/ ಪ್ರಮಾಣ ಪತ್ರಗಳ ನೈಜತೆ ಕುರಿತಂತೆ, ಸಕ್ಷಮ ಪ್ರಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಣವನ್ನು ಪಡೆದು, ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು.
4. ಅಧಿಕಾರಿ/ ನೌಕರರು ನೇಮಕಾತಿಗಾಗಿ ಸಲ್ಲಿಸಿರುವ ಜಾತಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರಿಗಳಿಂದ "ಸಿಂಧುತ್ವ"ವನ್ನು ಕಡ್ಡಾಯವಾಗಿ ಪಡೆದು, ಸೇವಾ ಪುಸ್ತಕದಲ್ಲಿ ದೃಢೀಕರಿಸುವುದು.
5. ಅಧಿಕಾರಿ/ ನೌಕರರು ನಿಯಮಾವಳಿಗಳನುಸಾರ ಪರೀಕ್ಷಾರ್ಥ ಅವಧಿ ಘೋಷಿಸಲು ಕಂಪನಿಯಿಂದ ನಿಗದಿಪಡಿಸಿರುವ ತರಬೇತಿಯನ್ನು ಪಡೆದಿರುವ ಬಗ್ಗೆ, ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು.
6. ಅಧಿಕಾರಿ/ ನೌಕರರು ನಿಯಮಾವಳಿಗಳನುಸಾರ ಪರೀಕ್ಷಾರ್ಥ ಅವಧಿ ಘೋಷಿಸಲು ನಿಗದಿಪಡಿಸಿರುವ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು.

(ಪು.ತಿ.ನೋ.)

ಹೆಚ್.ಸಿ.ಓ.-07/ಡಿ177/2017-18, ದಿನಾಂಕ:17.06.2017.

7. ಅಧಿಕಾರಿ/ ನೌಕರನು ಪರೀಕ್ಷಾರ್ಥ ಅವಧಿಯಲ್ಲಿ ಅಸಾಧಾರಣ ರಜೆಯನ್ನು ಪಡೆದಿರುವ ಮತ್ತು ಇದರ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿರುವ ಕುರಿತು ಪರಿಶೀಲಿಸುವುದು.
8. ಅಧಿಕಾರಿ/ ನೌಕರನ ಗೌಪ್ಯ ವರದಿಗಳನ್ನು ಸಲ್ಲಿಸುವುದು.
9. ಅಧಿಕಾರಿ/ ನೌಕರನು ನೇಮಕಾತಿ ಷರತ್ತಿನನ್ವಯ ಪಡೆದಿರುವ ಕಂಪ್ಯೂಟರ್ ಕೋರ್ಸಗಳ ಪ್ರಮಾಣ ಪತ್ರವನ್ನು ಪರಿಶೀಲಿಸುವುದು ಮತ್ತು ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು.
10. ಗುಂಪು-ಎ, ಬಿ, ಸಿ ಮತ್ತು ಡಿ ನೌಕರರ ಅರ್ಹತಾ ಪರೀಕ್ಷಣಾ ಅವಧಿಯನ್ನು ಘೋಷಿಸಲು ವಲಯ/ ವೃತ್ತ/ ವಿಭಾಗಗಳಿಂದ ಈ ಸುತ್ತೋಲೆದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ ಪ್ರತಿಯೊಂದು ಅಂಶಗಳನ್ನು ಸರಿಯಾಗಿ ಭರ್ತಿ ಮಾಡಿ ಲೆಕ್ಕಾಧಿಕಾರಿ(ಆಂತರಿಕ ಪರಿಶೋಧನೆ) ರವರಿಂದ ದೃಢೀಕರಿಸಿ, ಕಂಪನಿಯ ನೌಕರರ ಭರ್ತಿ ಮತ್ತು ಬಡತಿ ನಿಯಮಗಳ ಅನ್ವಯ ನೌಕರನ ಪರೀಕ್ಷಾರ್ಥ ಅವಧಿಯನ್ನು ಘೋಷಿಸುವ ಪ್ರಸ್ತಾವನೆಯನ್ನು ಸಕ್ಷಮ ನೇಮಕಾತಿ ಪ್ರಾಧಿಕಾರಿಗಳಿಗೆ ಸಲ್ಲಿಸುವುದು.
11. ಅರ್ಹತಾ ಪರೀಕ್ಷಣಾ ಅವಧಿಯನ್ನು ಘೋಷಿಸಲು ಸೇವಾ ಪುಸ್ತಕದೊಂದಿಗೆ ಎಲ್ಲಾ ಮೂಲ ದಾಖಲಾತಿಗಳನ್ನು ನಿಗದಿ ಪಡಿಸಿದ ಅನುಬಂಧ/ ಪ್ರಸ್ತಾವನೆಯೊಂದಿಗೆ ಲಗತ್ತಿಸಿ ಕಳುಹಿಸುವುದು.

ಪ್ರಧಾನ ವ್ಯವಸ್ಥಾಪಕರು
**(ಆಡಳಿತ ಮತ್ತು ಮಾ.ಸಂ.ಅ.)**

ಪ್ರತಿ:

1. ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಮುಖ್ಯ ಇಂಜಿನೀಯರ್(ವಿ.), ಹುಬ್ಬಳ್ಳಿ/ ಬೆಳಗಾವಿ ವಲಯ, ಹುವಿಸಕಂನಿ., ಹುಬ್ಬಳ್ಳಿ/ ಬೆಳಗಾವಿ.
3. ಆರ್ಥಿಕ ಸಲಹೆಗಾರರು(ಆಂ.ಪ.), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
4. ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.ಅ.), ಕಂಪನಿ ಕಾರ್ಯಾಲಯ, ಬೆವಿಸಕಂನಿ/ ಮವಿಸಕಂನಿ/ ಗುವಿಸಕಂನಿ/ ಚಾವಿಸನಿನಿ.
5. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
6. ಅಧೀಕ್ಷಕ ಇಂಜಿನೀಯರ್(ವಿ.)[ಮಾಹಿತಿ ತಂತ್ರಜ್ಞಾನ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ - ಮಾಹಿತಿಗಾಗಿ ಮತ್ತು ಹುವಿಸಕಂನಿ ಅಂತರ್ಜಾಲದಲ್ಲಿ ಪ್ರಕಟಿಸುವುದು.
7. ಎಲ್ಲಾ ಅಧೀಕ್ಷಕ ಇಂಜಿನೀಯರ(ವಿ)/ ನಿಯಂತ್ರಣಾಧಿಕಾರಿಗಳು, ಹುವಿಸಕಂನಿ,
8. ಪೊಲೀಸ ಅಧೀಕ್ಷಕರು, ಜಾಗೃತ ದಳ, ಹುವಿಸಕಂನಿ, ಹುಬ್ಬಳ್ಳಿ.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ.)/ ಉಪ ಲೆಕ್ಕನಿಯಂತ್ರಾಣಾಧಿಕಾರಿಗಳು, ಹುವಿಸಕಂನಿ.,________.
10. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ.)/ ಲೆಕ್ಕಾಧಿಕಾರಿ, ಹುವಿಸಕಂನಿ,.
11. ಹಿರಿಯ ಆಪ್ತ ಕಾರ್ಯದರ್ಶಿ(ವ್ಯ.ನಿ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಮತ್ತು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
12. ಹಿರಿಯ ಆಪ್ತ ಕಾರ್ಯದರ್ಶಿ[ನಿ(ತಾಂ.)], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
13. ಆಪ್ತ ಕಾರ್ಯದರ್ಶಿ(ಮು.ಆ.ಅ.), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
14. ಎಲ್ಲಾ ಶಾಖಾಧಿಕಾರಿಗಳು, ಹುವಿಸಕಂನಿ,
15. ಮಹಾ ಕಡತ/ ಕಛೇರಿ ಪ್ರತಿ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]

## ಅನುಬಂಧ

[ಅರ್ಹತಾ ಪರೀಕ್ಷಣಾ ಅವಧಿ ಘೋಷಿಸಲು ಮಾಹಿತಿ]

| | | | |
|---|---|---|---|
| 1 | ಹೆಸರು<br>ಕನ್ನಡ(ಬಿಡಿ ಅಕ್ಷರಗಳಲ್ಲಿ)<br>ENGLISH (IN BLOCK LETTERS) | : | |
| 2 | ಪದನಾಮ | : | |
| 3 | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳ | : | |
| 4 | ಹುವಿಸಕಂನಿ. ಪಿನ್ | : | |
| 5 | ಕೆಲಸಕ್ಕೆ ವರದಿ ಮಾಡಿಕೊಂಡ ದಿನಾಂಕ | : | |
| 6 | ವೃತ್ತಿ ಪೂರ್ವ ತರಬೇತಿಯಲ್ಲಿ ಉತ್ತೀರ್ಣರಾದ ಬಗ್ಗೆ ವಿವರಗಳು:<br>ಅ) ನೋಂದಣಿ ಸಂಖ್ಯೆ<br>ಆ) ಫಲಿತಾಂಶ ಪ್ರಕಟಣೆಗೊಂಡ ಆದೇಶ ಸಂಖ್ಯೆ ಮತ್ತು ದಿನಾಂಕ | :<br>:<br>: | |
| 7 | ಕನ್ನಡ ಭಾಷಾ ಪರೀಕ್ಷೆಯಲ್ಲಿ ವಿನಾಯಿತಿ ಇದೆ? ಇಲ್ಲವಾದಲ್ಲಿ, ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ವಿವರ:<br>ಅ) ನೋಂದಣಿ ಸಂಖ್ಯೆ<br>ಆ) ಫಲಿತಾಂಶ ಪ್ರಕಟಣೆಗೊಂಡ ಆದೇಶ ಸಂಖ್ಯೆ ಮತ್ತು ದಿನಾಂಕ | :<br>:<br>: | |
| 8 | ಪರೀಕ್ಷಾರ್ಥ ಅವಧಿಯಲ್ಲಿ L.W.A ಬಗೆಗಿನ ವಿವರಗಳು | : | |
| 9 | ಬಾಕಿ ಇರುವ/ ಇಲ್ಲದಿರುವ ಕುರಿತು ಇಲಾಖಾ ವಿಚಾರಣೆ/ ಲೋಕಾಯುಕ್ತ ಪ್ರಕರಣ/ ಎ.ಸಿ.ಬಿ. ಪ್ರಕರಣ ಹಾಗೂ ಕ್ರಿಮಿನಲ್ ಪ್ರಕರಣಗಳ ಮತ್ತು ವಿಚಾರಣೆಗಳು ಜರುಗಿ ದಂಡನಾವಧಿಯು ಜಾರಿಯಲ್ಲಿರುವ ವಿವರವಾದ ಮಾಹಿತಿಯನ್ನು ಲಗತ್ತಿಸುವುದು.<br>[ಸದರಿ ವಿವರಗಳ ಬಗ್ಗೆ ಸಂಬಂಧ ಪಟ್ಟ ವಲಯ/ ವೃತ್ತದ/ ವಿಭಾಗದ ಅನುಕ್ರಮವಾಗಿ ಮುಖ್ಯ ಇಂಜಿನಿಯರ್(ವಿ.)/ ಅಧೀಕ್ಷಕ ಇಂಜಿನಿಯರ್(ವಿ.)/ ಕಾರ್ಯನಿರ್ವಾಹಕ ಇಂಜಿನೀಯರ್(ವಿ.) ರವರಿಂದ ಮಾಹಿತಿ ಪಡೆದು ಸಲ್ಲಿಸುವುದು.] | : | |
| 10 | ಅಂಕಪಟ್ಟಿಗಳ ನೈಜತೆ ಕುರಿತು ಪಡೆದ ಪ್ರಮಾಣ ಪತ್ರದ ವಿವರ | : | |
| 11 | ಜಾತಿ ಪ್ರಮಾಣ ಪತ್ರದ ನೈಜತೆಯನ್ನು ದೃಢೀಕರಿಸುವ "ಸಿಂಧುತ್ವ ಪ್ರಮಾಣ ಪತ್ರ" ಪಡೆದಿರುವ ವಿವರ | : | |

(ಪು.ತಿ.ನೋ.)

| | | | |
|---|---|---|---|
| 12 | ಗೌಪ್ಯ ವರದಿಗಳು | : | |
| 13 | ನಿಗದಿಪಡಿಸಿದ ಕಂಪ್ಯೂಟರ್ ಕೋರ್ಸ್‌ಗಳ ಪ್ರಮಾಣ ಪತ್ರದ ವಿವರಗಳು:<br>ಅ) ಕೋರ್ಸ್‌ನ ಪ್ರಮಾಣ ಪತ್ರ<br>ಆ) ಕೋರ್ಸ್‌ನ ಅವಧಿ<br>ಇ) ಅಂಕ ಪಟ್ಟಿ<br>ಉ) ಕೋರ್ಸ್ ಮುಗಿದ ದಿನಾಂಕ<br>[ಪ್ರತಿಗಳನ್ನು ಪ್ರಮಾಣೀಕರಿಸಿ ಲಗತ್ತಿಸುವುದು.] | :<br><br>:<br>:<br>:<br>: | |

ಮೇಲೆ ತಿಳಿಸಿದ ಎಲ್ಲಾ ಮಾಹಿತಿಗಳು ಸರಿಯಾಗಿವೆ. ಶ್ರೀ/ಶ್ರೀಮತಿ ______________________________ ರವರು ದಿನಾಂಕ: __________ ರಲ್ಲಿ ಹುವಿಸಕಂನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ(ಅರ್ಹತ ಪರೀಕ್ಷಣೆ) ನಿಯಮಗಳು ಮತ್ತು ನೌಕರರ(ಜ್ಯೇಷ್ಠತಾ) ನಿಯಮಗಳ ಅನ್ವಯ ಅರ್ಹತಾ ಪರೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ.

ಲೆಕ್ಕಾಧಿಕಾರಿ/ ಉ.ಲೆ.ನಿ/ ನಿಯಂತ್ರಣಾಧಿಕಾರಿ

ಕಾ.ನಿ.ಇಂ.(ವಿ)/ ಅ.ಇಂ(ವಿ)/ ಮು.ಇಂ(ವಿ)

ಲೆಕ್ಕಾಧಿಕಾರಿ[ಆಂತರಿಕ ಪರಿಶೋಧನೆ]